# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ : M/s Sri Kumaraswamy Mineral Exports Private Limited ರವರಿಗೆ ಕೊಪ್ಪಳ ಜಿಲ್ಲೆಯ, ಕುಷ್ಟಗಿ ತಾಲ್ಲೂಕಿನ ಜಲಿಹಾಲ್, ಬಲುಟಗಿ ಮತ್ತು ಬಿಜ್ಕಲ್ ಗ್ರಾಮಗಳಲ್ಲಿ 25.20 ಮೆ.ವ್ಯಾ. ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು ಹಂಚಿಕೆ ಮಾಡುವ ಕುರಿತು.

ಓದಲಾಗಿದೆ : 1) ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ ರವರ ಪತ್ರ ಸಂಖ್ಯೆ:KREDL/08/SKMEPL-25.20 MW/Kushtagi/F-41(2021)/2563, ದಿನಾಂಕ:08.09.2021

2) ಸರ್ಕಾರದ ದಿನಾಂಕ:02.02.2022 ರ ಹಂಚಿಕೆ ಸಮಿತಿ ಸಭೆ.

**ಪ್ರಸ್ತಾವನೆ :-**

ಮೇಲೆ ಓದಲಾದ (1)ರ ಪತ್ರದಲ್ಲಿ ವ್ಯವಸ್ಥಾಪಕ ನಿರ್ದೇಶಕರು, ಕೆ.ಆರ್.ಇ.ಡಿ.ಎಲ್. ಇವರು ಸರ್ಕಾರಕ್ಕೆ ಸಲ್ಲಿಸಿರುವ ಪ್ರಸ್ತಾವನೆಯಲ್ಲಿ M/s Sri Kumaraswamy Mineral Exports Private Limited ರವರು ಕೊಪ್ಪಳ ಜಿಲ್ಲೆಯ, ಕುಷ್ಟಗಿ ತಾಲ್ಲೂಕಿನ ಜಲಿಹಾಲ್, ಬಲುಟಗಿ ಮತ್ತು ಬಿಜ್ಕಲ್ ಗ್ರಾಮಗಳಲ್ಲಿ 25.20 ಮೆ.ವ್ಯಾ. ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯ ಕುರಿತು ವಿಸ್ತೃತ ಯೋಜನಾ ವರದಿಯನ್ನು ತಯಾರಿಸಿ, ಕ್ರೆಡಲ್‌ಗೆ ಸಲ್ಲಿಸಿರುವುದಾಗಿ ಹಾಗೂ ಸದರಿ ಯೋಜನೆಯಿಂದ ಉತ್ಪಾದನೆಯಾಗುವ ವಿದ್ಯುತ್ತನ್ನು ವೀಲಿಂಗ್ ಮತ್ತು ಬ್ಯಾಂಕಿಂಗ್ ಮುಖಾಂತರ ಮೂರನೇ ವ್ಯಕ್ತಿಗೆ ಮಾರಾಟ ಮಾಡುವ ವರ್ಗದಡಿ ಪ್ರತಿ ವಿಂಡ್ ಟರ್ಬೈನ್ ಗೆ 4 ಎಕರೆಯಂತೆ Footprint basis ಲೆಕ್ಕೀಕರಿಸಿ, ಜಮೀನುಗಳನ್ನು ಉಪಯೋಗಿಸುವುದು ಮತ್ತು ಪವನ ವಿದ್ಯುತ್ ಘಟಕಗಳ ಅಂತರವನ್ನು MNRE ಸುತ್ತೋಲೆ/ಮಾರ್ಗಸೂಚಿಯಂತೆ ಅಳವಡಿಸುವಂತೆ ಷರತ್ತುಗಳನ್ನು ವಿಧಿಸಿ, ಹಂಚಿಕೆ ನೀಡುವಂತೆ ಕೋರಿರುವುದಾಗಿ ತಿಳಿಸಿರುತ್ತಾರೆ.

M/s Sri Kumaraswamy Mineral Exports Private Limited ಕಂಪನಿಯು ದಿನಾಂಕ: 02.06.2018ರಂದು ಬೆಂಗಳೂರಿನಲ್ಲಿ ಸ್ಥಾಪಿತಗೊಂಡಿರುತ್ತದೆ. ಸದರಿಯವರ ನೆಟ್‌ವರ್ತ್ ದಿನಾಂಕ: 31.03.2021ರ ಅಂತ್ಯಕ್ಕೆ ರೂ.695.81 ಕೋಟಿಗಳಾಗಿರುತ್ತದೆ ಎಂದು ಚಾರ್ಟೆಡ್ ಅಕೌಂಟೆಂಟ್ ರವರು ದೃಢೀಕರಣ ಪತ್ರವನ್ನು ನೀಡಿರುತ್ತಾರೆ.

ಮೇಲೆ ಓದಲಾದ (2)ರ ಹಂಚಿಕೆ ಸಮಿತಿ ಸಭೆಯಲ್ಲಿ M/s Sri Kumaraswamy Mineral Exports Private Limited ರವರಿಗೆ ಕೊಪ್ಪಳ ಜಿಲ್ಲೆಯ, ಕುಷ್ಟಗಿ ತಾಲ್ಲೂಕಿನ ಜಲಿಹಾಲ್, ಬಲುಟಗಿ ಮತ್ತು ಬಿಜ್ಕಲ್ ಗ್ರಾಮಗಳಲ್ಲಿ State Grid ವರ್ಗದಡಿಯಲ್ಲಿ ಹಂಚಿಕೆ ನೀಡುವಂತೆ ಕೋರಿರುವ 25.2 ಮೆ.ವ್ಯಾ ಸಾಮರ್ಥ್ಯದ ಸ್ಥಳವು ಹಂಚಿಕೆಗೆ ಲಭ್ಯವಿದ್ದು, ಯೋಜನೆಯ ಸ್ಥಳವು ಖಾಸಗಿ ಜಮೀನಾಗಿರುತ್ತದೆ. ಸದರಿಯವರು ಅಳವಡಿಸಲು ಉದ್ದೇಶಿಸಿರುವ 25.2 ಮೆ.ವ್ಯಾ ಸಾಮರ್ಥ್ಯದ ವಿಂಡ್ ಟರ್ಬೈನ್ ನ ಅಕ್ಷಾಂಶ ಮತ್ತು ರೇಖಾಂಶಗಳನ್ನು ಸಹ ನೀಡಿರುತ್ತಾರೆ. ಯೋಜನೆಗೆ ಬೇಕಾಗುವ ಜಮೀನು ಪಡೆಯುವುದು ಅಭಿವೃದ್ಧಿದಾರರ ಜವಾಬ್ದಾರಿಯಾಗಿರುತ್ತದೆ ಹಾಗೂ ಸದರಿಯವರು 25.2 ಮೆ.ವ್ಯಾ ಸಾಮರ್ಥ್ಯದ 12 ವಿಂಡ್ ಟರ್ಬೈನ್‌ನನ್ನು ಅಳವಡಿಸುತ್ತಿದ್ದು, ಸದರಿಯವರು ಅಳವಡಿಸುವ ಟರ್ಬೈನ್ ನ footprint ಜಾಗಕ್ಕೆ 4 ಎಕರೆಯಂತೆ ಒಟ್ಟು 48 ಎಕರೆ (4x12=48) ಜಮೀನನ್ನು Topomap 57 A/1 ಮತ್ತು 57 A/5 ರಲ್ಲಿ ಮಾತ್ರ ಉಪಯೋಗಿಸಬಹುದಾಗಿರುತ್ತದೆ. ಸದರಿಯವರು 25.2 ಮೆ.ವ್ಯಾ ಸಾಮರ್ಥ್ಯದಿಂದ ಉತ್ಪಾದಿಸುವ ವಿದ್ಯುತ್ ನ್ನು State Grid ವರ್ಗದಡಿಯಲ್ಲಿ M/s Suzlon Gujarat Wind Park Limited ರವರ 220 kV Pooling substation ಮುಖಾಂತರ KPTCL ನ ಕುಷ್ಟಗಿ 220 kV substation ಗೆ evacuate ಮಾಡುವುದಾಗಿ ತಿಳಿಸಿರುತ್ತಾರೆ. ಆದರೆ, ನಿರ್ದೇಶಕರು (ತಾಂತ್ರಿಕ), ಕೆ.ಪಿ.ಟಿ.ಸಿ.ಎಲ್ ರವರು ಸಭೆಯಲ್ಲಿ ಸದರಿ ಯೋಜನೆಗೆ evacuation ಅನುಮತಿಯನ್ನು ಕುಷ್ಟಗಿ 400 kV Substation ಅನುಷ್ಠಾನಗೊಂಡ ನಂತರ evacuate ಮಾಡಬಹುದಾಗಿದೆ ಎಂದು ತಿಳಿಸುತ್ತಾ, ಈ ಸಂಬಂಧ ಅಭಿವೃದ್ಧಿದಾರರಿಂದ ಒಪ್ಪಿಗೆಯ ಮುಚ್ಚಳಿಕೆ ಪತ್ರ ಪಡೆದುಕೊಳ್ಳಲು ತೀರ್ಮಾನಿಸಿ, ಈ ಕೆಳಕಂಡ ಷರತ್ತುಗಳಿಗೊಳಪಟ್ಟು, M/s Sri Kumaraswamy Mineral Exports Private Limited ರವರಿಗೆ 25.20 ಮೆ.ವ್ಯಾ. ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು ಹಂಚಿಕೆ ನೀಡಲು ಸಮಿತಿಯು ಸರ್ವಾನುಮತಿಯಿಂದ, ಸಿದರು. ಈ ಸಂಬಂಧ ಅಭಿವೃದ್ಧಿದಾರರಿಂದ ಒಪ್ಪಿಗೆಯ ಮುಚ್ಚಳಿಕೆ ಪತ್ರ ಪಡೆದುಕೊಳ್ಳಲು ತಿಳಿಸಿದರು.

1) ಸದರಿ ಯೋಜನೆಯಿಂದ ಉತ್ಪಾದನೆಯಾಗುವ ವಿದ್ಯುತ್ ನ್ನು ವೀಲಿಂಗ್ ಮತ್ತು ಬ್ಯಾಂಕಿಂಗ್ ಮುಖಾಂತರ 3 ನೇ ವ್ಯಕ್ತಿಗೆ ಮಾರಾಟ ಮಾಡಲು

Wind Section
Inward No. 194
Date 03.03.22

2) ಕುಷ್ಟಗಿ 400 kV Substation ಅನುಷ್ಠಾನಗೊಂಡ ನಂತರ ಸದರಿ ಯೋಜನೆಗೆ KPTCL ನಿಂದ evacuation ಅನುಮತಿ ನೀಡುವ ಹಾಗೂ

3) ಈಗಾಗಲೇ ಇತರೆ ಅಭಿವೃದ್ಧಿದಾರರುಗಳು ಹಂಚಿಕೆ/ತಾತ್ವಿಕ ಅನುಮೋದನೆಯನ್ನು ಪಡೆದಿರುವ ಪ್ರದೇಶದಲ್ಲಿ ಪ್ರಸ್ತಾಪಿತ ಯೋಜನೆಯು Overlap ಆಗಿದ್ದಲ್ಲಿ, ಸದರಿಯವರು ಕೋರಿರುವ ಪ್ರಸ್ತಾವನೆಯ

**Geographical area description for 25.20 MW capacity wind power project**

| Sl. No. | WTG No. | Capacity in MW | Village | Taluk District | Survey No. | Land area in Acres-Guntas | Latitude and Longitude |
|---|---|---|---|---|---|---|---|
| 1 | KST-182 | 2.1 | Jalihal | Kushtagi/ Koppal | 15/2 | 4-00 | 15°52'23.2"N, 76°14'24.0"E |
| 2 | KST-186 | 2.1 | Balgutagi | | 101/4 | 2-03 | 15°51'23.8"N, 76°15'01.4"E |
| 3 | KST-185 | 2.1 | Balgutagi | | 89/2 | 4-00 | 15°50'52.5"N, 76°14'52.5"E |
| 4 | KST-187 | 2.1 | Balgutagi | | 106/2, 106/7 | 4-00 | 15°51'47.0"N, 76°15'15.3"E |
| 5 | KST-238 | 2.1 | Balgutagi | | 15/1/5 | 4-00 | 15°52'.20.9"N, 76°16'19.8"E |
| 6 | KST-239 | 2.1 | Balgutagi | | 37/1 | 4-00 | 15°52'05.8"N, 76°16'11.7"E |
| 7 | KST-242 | 2.1 | Balgutagi | | 70/3, 70/2 | 4-00 | 15°51'0.43"N, 76°15'28.3"E |
| 8 | KST-243 | 2.1 | Balgutagi | | 83/2, 83/3 | 4-00 | 15°50'44.0"N, 76°15'12.8"E |
| 9 | KST-241 | 2.1 | Balgutagi | | 76/3, 76/6, 73/1 | 4-00 | 15°51'18.6"N, 76°15'32.1"E |
| 10 | KST-240 | 2.1 | Balgutagi | | 40/4, 40/5 | 4-00 | 15°51'46.7"N, 76°16'03.5"E |
| 11 | KST-081 | 2.1 | Bijakal | | 59 | 4-00 | 15°50'09.8"N, 76°14'02.8"E |
| 12 | KST-237 | 2.1 | Balgutagi | | 18/3 | 4-00 | 15°52'38.5"N, 76°16'38.2"E |
| | Total | 25.2 | | | | 46-03 | |

ಕೆ.ಇ.ಆರ್.ಸಿ.ಯು ದಿನಾಂಕ:08.02.2022ರ ಆದೇಶದಲ್ಲಿ ನವೀಕರಿಸಬಹುದಾದ ಇಂಧನ ಯೋಜನೆಗಳಿಗೆ ಬ್ಯಾಂಕಿಂಗ್ ಸೌಲಭ್ಯವನ್ನು ಒಂದು ವರ್ಷದ ಅವಧಿಗೆ ನೀಡುವ ವಿಷಯದಲ್ಲಿ ಮಾನ್ಯ ಉಚ್ಚ ನ್ಯಾಯಾಲಯದ ರಿಟ್ ಅರ್ಜಿ ಸಂಖ್ಯೆ:1061/2019 ಹಾಗೂ ಮಾನ್ಯ ಸರ್ವೋಚ್ಚ ನ್ಯಾಯಾಲಯದ ಸಿವಿಲ್ ಅಪೀಲ್ ಸಂಖ್ಯೆ:9619-9637/2019ರಲ್ಲಿ ಮಾನ್ಯ ನ್ಯಾಯಾಲಯಗಳು ನೀಡುವ ಅಂತಿಮ ಆದೇಶಗಳಿಗೊಳಪಟ್ಟು ದಿನಾಂಕ:31.07.2022ರವರೆಗೆ ವಿಸ್ತರಿಸಿ ಆದೇಶಿಸಿರುತ್ತದೆ.

…3